O.S. NO. 91/2018
DW – 1.
Dated 10–12–2024.

ಸಾಕ್ಷಿಯನ್ನು ಈ ದಿನ ದಿನಾಂಕ 10–12–2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಆರ್ ಕೆ ಪಿ ವಕೀಲರಿಂದಃ

ವಾದಿಯವರು ಸಲ್ಲಿಸಿದ ಪ್ರಸ್ತುತ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ದಾವಾ ಆಸ್ತಿಗಳ ಸರ್ವೆ ನಂಬರ ಹೇಳಬಲ್ಲೆ. ಅವು ಮುರಕೀಭಾವಿ ಗ್ರಾಮದ ಸರ್ವೆ ನಂ. 18, 17, 10, 93, ದೇವಲಾಪೂರ ಗ್ರಾಮದ ಸರ್ವೆ ನಂ. 11 ಮತ್ತು 12 ಇರುತ್ತವೆ. ದೇವಲಾಪೂರ ಗ್ರಾಮದ ಸರ್ವೆ ನಂ. 8 ಖುಲ್ಲಾ ಜಾಗಾ ಮತ್ತು ಮನೆ ಮೇಲೆ ಸಹ ವಾದಿಯರು ಕೇಸು ಹಾಕಿರುತ್ತಾರೆ ಎಂದರೆ ನಿಜ. ನಮ್ಮ ಕುಟುಂಬದ ಮೂಲ ಪುರುಷ ಮಲ್ಲಪ್ಪ ಬಸಪ್ಪ ಕೋಳದೂರ ಎಂದರೆ ನಿಜ. ನಮ್ಮ ಕುಟುಕಂಬದ ಅಡ್ಡ ಹೆಸರು ಮೊದಲು ಮುರಕೀಬಾವಿ ಅಂತಾ ಇತ್ತು ತದ ನಂತರ ಕೋಳದೂರ ಅಂತಾ ಮಾಡಿಸಿಕೊಂಡಿರುತ್ತೇವೆ. ಸದರಿ ಮಲ್ಲಪ್ಪ ಬಸಪ್ಪ ಕೋಳದೂರ ರವರಿಗೆ ಒಟ್ಟು 4 ಜನ ಮಕ್ಕಳು ಎಂದರೆ ಸರಿ. ನನ್ನ ತಂದೆಯ ಮೂಲ ಹೆಸರು ವೀರಭದ್ರಪ್ಪ ಅಂತಾ ಇತ್ತು ಆದರೆ ಆವರ ತಾಯಿ ಬಸಲಿಂಗಪ್ಪ ಅಂತಾ ಸೇರಿಸಿದ್ದಾರೆ. ನನ್ನ ತಾಯಿ ಹೆಸರು ಬಸವ್ವ @ ಕರಿಬಸವ್ವ ಎಂದರೆ ನಿಜ. ನನ್ನ ಚಿಕ್ಕಪ್ಪ ರುದ್ರಪ್ಪನ ಹೆಂಡತಿ ಹೆಸರು ನೀಲವ್ವ ಎಂದರೆ ಸರಿ. ಸದರಿ ನೀಲವ್ವ ಮತ್ತು ನನ್ನ ತಾಯಿ ಒಂದೇ ತಾಯಿ ಮಕ್ಕಳು ಎಂದರೆ ನಿಜ. ನನ್ನ ಇನ್ನೊಬ್ಬ ಚಿಕ್ಕಪ್ಪ ಬಸವಣ್ಣೆಪ್ಪ ರವರ ಹೆಂಡತಿ ಬಸವ್ವ ಮತ್ತು ನನ್ನ ತಾಯಿ ಮತ್ತೊಬ್ಬ ಚಿಕ್ಕಪ್ಪ ನಾಗಪ್ಪನ ಹೆಂಡತಿ

ಶಾಂತವ್ವ ಒಂದೇ ತಾಯಿ ಮಕ್ಕಳು ಎಂದರೆ ನಿಜ. ವಾದಿಯರು ಮತ್ತು ನಾವು ಪ್ರತಿವಾದಿಯರದು ಒಟ್ಟು ಕುಟುಂಬ ಎಂದರೆ ನಿಜ.

4 ನೇ ಪ್ರತಿವಾದಿ ಸರೋಜಾ ರವರು ಅಸಲು ದಾವಾ ಸಂಖ್ಯೆ 168/2012 ರಿತ್ಯ ಪ್ರಸ್ತುತ ದಾವೆಯ ವಾದಿಯರ ಮೇಲೆ ವಾಟ್ನಿ ಕೊರಿ ದಾವೆ ಸಲ್ಲಿಸಿದ್ದರು ಎಂದರೆ ನಿಜ. ಸದರಿ ಅಸಲು ದಾವಾ ಸಂಖ್ಯೆ 168/2012 ಸರ್ವೆ ನಂ. 28/2, 28/7, 18/5, 17/3, 10/2ಎ/1 ನೇದ್ದರ ಆಸ್ತಿಗಳ ಮೇಲೆ ಹಾಕಿದ್ದರು ಎಂದರೆ ನಿಜ. ಸದರಿ ಆಸ್ತಿಗಳು ಮದನಬಾವಿ ಗ್ರಾಮದ ಸರ್ವೆ ನಂಬರದಲ್ಲಿ ಇರುತ್ತವೆ ಎಂದರೆ ನಿಜ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯ ವಾದಿಯರಿಗೆ ಕೊರ್ಟಗೆ ಬರಬೇಡಿ ರಾಜಿ ಮಾಡಿಕೊಳ್ಳೊಣ ಅಂತಾ 4 ನೇ ಪ್ರತಿವಾದಿ ಹೇಳಿದ್ದರಿಂದ ಅವರು ಸದರಿ ದಾವೆಯಲ್ಲಿ ಹಾಜರಾಗದೇ ಯಾವುದೇ ಲಿಖಿತ ಹೇಳಿಕೆ ಸಲ್ಲಿಸಲಿಲ್ಲ ಎಂದರೆ ಸರಿ. ವಾದಿಯರು ಸದರಿ ದಾವೆಯಲ್ಲಿ ಏಕತರ್ಫಿ ಉಳಿದಿದ್ದರಿಂದ ನಾವು ಅಸಲು ದಾವಾ ಸಂಖ್ಯೆ 168/2012 ರಲ್ಲಿ ಏಕತರ್ಫಿ ಡಿಕ್ರಿ ಪಡೆದಿದ್ದೇವೆ ಎಂದರೆ ನಿಜ. ವಾದಿಯರಿಗೆ ಅಸಲು ದಾವಾ ಸಂಖ್ಯೆ 168/2012 ರಲ್ಲಿ ಆದ ಏಕತರ್ಫಿ ಡಿಕ್ರಿ ಬಗ್ಗೆ ನಾವು ತಿಳಿಸಲಿಲ್ಲ ಎಂದರೆ ಸಾಕ್ಷಿ ಸದರಿ ದಾವೆ ನಾನು ಸಲ್ಲಿಸಿರಲಿಲ್ಲ ಎಂದು ನುಡಿದಿರುತ್ತಾರೆ. ಅಸಲು ದಾವಾ ಸಂಖ್ಯೆ 168/2012 ರಲ್ಲಿ ಆದ ಪ್ರಾಥಮಿಕ ಡಿಕ್ರಿ ಮೇಲೆ ಎಫ ಡಿ ಪಿ ದಾಖಲಿಸದೇ ಪ್ರಾಥಮಿಕ ಡಿಕ್ರಿ ಆಧಾರದ ಮೆಲೆ ಅವರವರ ಹೆಸರು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಷಯ ಪ್ರಸ್ತುತ ದಾವೆ ವಾದಿಯರಿಗೆ 2018

O.S. NO. 91/2018
DW - 1.
Dated 10-12-2024.

ರವರೆಗೆ ಗೊತ್ತಾಗಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೂ ಸಹ ಏಕತರ್ಫಿ ಡಿಕ್ರಿ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿದಿರುತ್ತಾರೆ. 2018 ರಲ್ಲಿ ವಾದಿಯರು ನನ್ನ ಹತ್ತಿರ ಬಂದು ದಾವಾ ಆಸ್ತಿ ದಾಖಲೆಗಳಲ್ಲಿ ತಮ್ಮ ಹೆಸರು ಹಚ್ಚುವಂತೆ ಕೇಳಿದರು ಎಂದರೆ ಸರಿ. ಆಗ ನಾವು ಎಲ್ಲ ಪ್ರತಿವಾದಿಗಳು ಅಸಲು ದಾವಾ ಸಂಖ್ಯೆ 168/2012 ರಲ್ಲಿ ಆದ ಡಿಕ್ರಿ ಪ್ರಕಾರ ಹೆಸರು ಹಚ್ಚಿದ್ದು ಆಗಿರುತ್ತದೆ ನಿಮ್ಮ ಹೆಸರು ಹಚ್ಚಲು ಬರುವುದಿಲ್ಲ ಅಂತಾ ವಾದಿಯರಿಗೆ ಹೇಳಿದ್ದೇವು ಎಂದರೆ ಸರಿಯಲ್ಲ. ಹೀಗಾಗಿ ಪ್ರಸ್ತುತ ದಾವೆಯನ್ನು ವಾದಿಯರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.